11


**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು**

**ಕೆ.ಎಸ್.ಇ.ಇ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03**

**ದೂರವಾಣಿ ಸಂಖ್ಯೆ: 23341615, 23562283, ಫ್ಯಾಕ್ಸ್: 080-23347670 e-mail:ksqaacbangalore@gmail.com**


ಸಂಖ್ಯೆ: ಕೆ.ಎಸ್.ಕ್ಯು.ಎ.ಎ.ಸಿ/ಶಾಲಾಸಿದ್ಧಿ.ಸು/42/2018-19 ದಿನಾಂಕ:19-02-2019

## ಸುತ್ತೋಲೆ

ವಿಷಯ : 2018-19ನೇ ಸಾಲಿನ 'ಶಾಲಾಸಿದ್ಧಿ' ಕಾರ್ಯಕ್ರಮದ ಶಾಲಾ ಬಾಹ್ಯ-ಮೌಲ್ಯಮಾಪನದ ಕುರಿತು

ಉಲ್ಲೇಖ : ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ: ಕೆ.ಎಸ್.ಕ್ಯು.ಎ.ಎ.ಸಿ/ಶಾಲಾಸಿದ್ಧಿ.ಸು/42/2018-19, ದಿನಾಂಕ: 02.01.2019

~*~*~*~

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿನ ಆಯ್ಕೆ ಮಾಡಿದ ಶೇ.10% ರಷ್ಟು ಸರ್ಕಾರಿ ಕಿರಿಯ, ಹಿರಿಯ ಮತ್ತು ಪ್ರೌಢಶಾಲೆಗಳಿಗೆ ನಿಗದಿತ ವೇಳಾಪಟ್ಟಿಯಂತೆ ಸ್ವ-ಮೌಲ್ಯಮಾಪನವನ್ನು ಕೈಗೊಳ್ಳಲಾಗಿರುತ್ತದೆ. ಈ ಕಾರ್ಯಕ್ರಮದ ಮುಂದಿನ ಹಂತವಾಗಿ ಸ್ವ-ಮೌಲ್ಯಮಾಪನಕ್ಕೆ ಒಳಪಟ್ಟ ಶಾಲೆಗಳಲ್ಲಿ ಶೇ.10 ರಷ್ಟು ಶಾಲೆಗಳನ್ನು ಬಾಹ್ಯ-ಮೌಲ್ಯಮಾಪನಕ್ಕೆ ಒಳಪಡಿಸಬೇಕಾಗಿದೆ.

**'ಶಾಲಾಸಿದ್ಧಿ' ಕಾರ್ಯಕ್ರಮದಡಿಯಲ್ಲಿ ಶಾಲೆಯನ್ನು 07 ಪ್ರಮುಖ ಕಾರ್ಯ ಕ್ಷೇತ್ರಗಳಲ್ಲಿ ಬಾಹ್ಯ-ಮೌಲ್ಯಮಾಪನ ಮಾಡುವುದು.**

1. ಶಾಲಾ ಸಂಪನ್ಮೂಲಗಳನ್ನು ಅನುವುಗೊಳಿಸುವುದು: ಲಭ್ಯತೆ, ಸೂಕ್ತತೆ ಮತ್ತು ಉಪಯೋಗಾರ್ಹತೆ.
2. ಬೋಧನೆ-ಕಲಿಕೆ ಮತ್ತು ಮೌಲ್ಯಮಾಪನ.
3. ವಿದ್ಯಾರ್ಥಿಗಳ ಪ್ರಗತಿ, ಸಾಧನೆ ಮತ್ತು ಬೆಳವಣಿಗೆ.
4. ಶಿಕ್ಷಕರ ಕಾರ್ಯನಿರ್ವಹಣೆ ಮತ್ತು ವೃತ್ತಿಪರ ಬೆಳವಣಿಗೆಯ ನಿರ್ವಹಣೆ.
5. ಶಾಲಾ ನಾಯಕತ್ವ ಮತ್ತು ನಿರ್ವಹಣೆ
6. ಒಳಗೊಳ್ಳುವಿಕೆ, ಆರೋಗ್ಯ ಮತ್ತು ಸುರಕ್ಷತೆ.
7. ಸಮುದಾಯದ ಉತ್ಪಾದಕ ಸಹಭಾಗಿತ್ವ

   ಈ ಮೂಲಕ ಶೈಕ್ಷಣಿಕ ಹಾಗೂ ಶಾಲಾ ಸಂಬಂಧಿತ ಇತರ ವಿಷಯಗಳನ್ನೊಳಗೊಂಡಂತೆ ಲಭ್ಯವಿರುವ ಸೌಲಭ್ಯಗಳು ಹಾಗೂ ಕೊರತೆಗಳನ್ನು ಮೌಲ್ಯಮಾಪನದ ಮೂಲಕ ಗುರುತಿಸಿ, ಶಾಲೆಯ ಸಮಗ್ರ ಅಭಿವೃದ್ಧಿಗೆ ಅಗತ್ಯತೆಗಳನ್ನು ಪೂರೈಸಲು ಹಾಗೂ ಕಾನೂನುಗಳನ್ನು ರೂಪಿಸಲು ಸರ್ಕಾರವು ಕ್ರಮಗಳನ್ನು ತೆಗೆದುಕೊಳ್ಳುವುದು.

**ವ್ಯಾಪ್ತಿ:-**

- ಸ್ವ-ಮೌಲ್ಯಮಾಪನಕ್ಕೆ ಒಳಗಾದ ಶಾಲೆಗಳಲ್ಲಿ ಶೇ.10 ರಷ್ಟು ಆಯ್ದ ಶಾಲೆಗಳನ್ನು ಮಾತ್ರ ಬಾಹ್ಯ ಮೌಲ್ಯಮಾಪನಕ್ಕೆ ಒಳಪಡಿಸಲಾಗುವುದು.
- ಸ್ವ-ಮೌಲ್ಯಮಾಪನಕ್ಕೆ ಒಳಪಟ್ಟ ಶಾಲೆಗಳ ಸಂಖ್ಯೆ - 4826.
  - ➢ ಕಿರಿಯ ಪ್ರಾಥಮಿಕ ಶಾಲೆಗಳು - 2149
  - ➢ ಹಿರಿಯ ಪ್ರಾಥಮಿಕ ಶಾಲೆಗಳು - 2203
  - ➢ ಪ್ರೌಢಶಾಲೆಗಳು - 474
- ಬಾಹ್ಯ-ಮೌಲ್ಯಮಾಪನಕ್ಕೆ ಒಳಪಡುವ ಶಾಲೆಗಳ ಸಂಖ್ಯೆ - 494.
  - ➢ ಕಿರಿಯ ಪ್ರಾಥಮಿಕ ಶಾಲೆಗಳು - 207
  - ➢ ಹಿರಿಯ ಪ್ರಾಥಮಿಕ ಶಾಲೆಗಳು - 230
  - ➢ ಪ್ರೌಢಶಾಲೆಗಳು - 57

**ಬಾಹ್ಯ-ಮೌಲ್ಯಮಾಪನ ವಿಧಾನ:-**

- ಶಾಲೆಗಳ ಬಾಹ್ಯ-ಮೌಲ್ಯಮಾಪನವು ಶಾಲೆಯ ಸ್ವ-ಮೌಲ್ಯಮಾಪನ ಪ್ರಕ್ರಿಯೆಗೆ ಪೂರಕವಾಗಿದೆ.
- ಶಾಲೆಯು ಸ್ವ-ಮೌಲ್ಯಮಾಪನ ಮತ್ತು ಬಾಹ್ಯ-ಮೌಲ್ಯಮಾಪನದ ಎರಡೂ ವಿಧಾನಗಳ ಒಡಂಬಡಿಕೆಯೊಂದಿಗೆ ಕಾರ್ಯನಿರ್ವಹಿಸುತ್ತದೆ.
- ಶಾಲೆಯ ಸ್ವ-ಮೌಲ್ಯಮಾಪನದ ಏಳು ಪ್ರಮುಖ ಕಾರ್ಯಕ್ಷೇತ್ರಗಳಿಗೆ ಅನುಗುಣವಾಗಿ ಬಾಹ್ಯ-ಮೌಲ್ಯಮಾಪನವನ್ನು ಕೈಗೊಳ್ಳಲಾಗುವುದು.
- ಈ ಪ್ರಕ್ರಿಯೆಯು ಪಾರದರ್ಶಕತೆ, ನಿಖರತೆಯೊಂದಿಗೆ ಸಂಪೂರ್ಣ ಶಾಲಾ ಸುಧಾರಣೆಯ ಗರಿಷ್ಠ ಹಂತವನ್ನು ತಲುಪುವ ಉದ್ದೇಶವನ್ನು ಹೊಂದಿದೆ.
- ಸ್ವ-ಮೌಲ್ಯಮಾಪನದ ನಂತರ ಜಿಲ್ಲೆಯ ಡಯಟ್‌ನ ಪ್ರಾಂಶುಪಾಲರ ನೇತೃತ್ವದಲ್ಲಿ ಬಾಹ್ಯ ಮೌಲ್ಯಮಾಪಕರ ತಂಡ ಶಾಲೆಗಳಿಗೆ ಭೇಟಿ ನೀಡುವರು.
- ಬಾಹ್ಯ-ಮೌಲ್ಯಮಾಪಕರು ಶಿಕ್ಷಣ ವ್ಯವಸ್ಥೆಗೆ ಆಂತರಿಕರಾಗಿದ್ದು, ಶಾಲೆಗೆ ಬಾಹ್ಯರಾಗಿರುತ್ತಾರೆ.
- ಶಾಲೆಯ ಸ್ವ-ಮೌಲ್ಯಮಾಪನದ ಆಧಾರದ ಮೇಲೆ NUEPA ದ ವೆಬ್‌ಪೋರ್ಟಲ್‌ನ ಡ್ಯಾಶ್‌ಬೋರ್ಡನಲ್ಲಿರುವ ಏಳು ಪ್ರಮುಖ ಕಾರ್ಯಕ್ಷೇತ್ರಗಳಿಗೆ ಅನುಗುಣವಾಗಿ ಅಗತ್ಯವಾದ ಎಲ್ಲಾ ಪೂರಕ ಆಧಾರಗಳನ್ನು ಸಿದ್ಧಪಡಿಸಿಕೊಂಡು, ಮುಖ್ಯಶಿಕ್ಷಕರು/ಪ್ರಾಂಶುಪಾಲರು, ವಿದ್ಯಾರ್ಥಿಗಳು, ಶಿಕ್ಷಕರು, ತಂದೆ,ತಾಯಿ/ಪೋಷಕರು, ಎಸ್.ಡಿ.ಎಂ.ಸಿ ಸದಸ್ಯರು ಮತ್ತು ನಿಕಟ ಸಮುದಾಯದ ಸದಸ್ಯರನ್ನೂ ಒಳಗೊಂಡಂತೆ ಎಲ್ಲಾ ಭಾಗೀದಾರರನ್ನು ಬಾಹ್ಯ-ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡು ಶಾಲೆಯ ಸುಧಾರಣೆಯ ಅಗತ್ಯತೆಗಳನ್ನು ಚರ್ಚಿಸುವುದು.
- ಬಾಹ್ಯ-ಮೌಲ್ಯಮಾಪಕರು ಶಾಲೆಯ ಬಾಹ್ಯ-ಮೌಲ್ಯಮಾಪನದ ಪ್ರಕ್ರಿಯೆಯ ನಂತರ NUEPA ದ ವೆಬ್‌ಪೋರ್ಟಲ್‌ನಲ್ಲಿರುವ ಡ್ಯಾಶ್ ಬೋರ್ಡನ್ನು ಅಪ್‌ಲೋಡ್ ಮಾಡುವರು.
- ವೆಬ್‌ಪೋರ್ಟಲ್‌ನಲ್ಲಿರುವ ಡ್ಯಾಶ್ ಬೋರ್ಡನ್ನು ಅಪ್‌ಲೋಡ್ ಮಾಡುವ ಮೊದಲು ಕಡ್ಡಾಯವಾಗಿ ಮುದ್ರಿತ ಪ್ರತಿ/ಹಾರ್ಡ್‌ಕಾಪಿಯನ್ನು ಶಾಲೆಯಲ್ಲಿ ಕಾಯ್ದಿರಿಸುವುದು.

**ರಾಜ್ಯ ಹಂತದ ಕಾರ್ಯಗಳು:-**

1. NUEPA ವತಿಯಿಂದ ತರಬೇತಿ ಪಡೆದ ಸಂಪನ್ಮೂಲ ವ್ಯಕ್ತಿಗಳಿಂದ ರಾಜ್ಯ ಹಂತದಲ್ಲಿ ಪ್ರತೀ ಜಿಲ್ಲೆಯಿಂದ ಡಯಟ್‌ನ ನೋಡಲ್ ಅಧಿಕಾರಿಯೂ ಸೇರಿದಂತೆ ಒಟ್ಟು 4 ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿಯನ್ನು ನೀಡಲಾಗಿದೆ.
2. ಬಾಹ್ಯ ಮೌಲ್ಯಮಾಪಕರಿಗೆ ಪ್ರಯಾಣ ಭತ್ಯೆ, ದಿನ ಭತ್ಯೆ ಹಾಗೂ ವೆಬ್‌ಪೋರ್ಟಲ್‌ನನ್ನು ಭರ್ತಿ ಮಾಡಲು ಅನುದಾನದ ಬಿಡುಗಡೆ.
3. ಶಾಲೆಯ ಬಾಹ್ಯ-ಮೌಲ್ಯಮಾಪನದ ವೇಳಾಪಟ್ಟಿಯನ್ನು ನೀಡುವುದು.
4. ಆಯ್ಕೆಯಾದ ಎಲ್ಲ ಶಾಲೆಗಳಲ್ಲಿ ಬಾಹ್ಯ-ಮೌಲ್ಯಮಾಪನದ ನಂತರ NUEPA ದ ವೆಬ್‌ಪೋರ್ಟಲ್‌ನಲ್ಲಿರುವ ಡ್ಯಾಶ್ ಬೋರ್ಡನ್ನು ಅಪ್‌ಲೋಡ್ ಮಾಡುವುದಕ್ಕೆ ಮಾರ್ಗದರ್ಶನ ಮಾಡುವುದು.

**ಜಿಲ್ಲಾ ಹಂತದ ಕಾರ್ಯಗಳು:-**

1. ಜಿಲ್ಲಾ ಡಯಟ್ ಹಂತದಲ್ಲಿ ಪ್ರತೀ ಬ್ಲಾಕ್‌ನ ಒಬ್ಬರು ಬಿ.ಇ.ಒ, ಬಿ.ಆರ್.ಸಿ ಬಿ.ಆರ್.ಪಿ/ಇ.ಸಿ.ಒ, ಒಬ್ಬರು ಸಿ.ಆರ್.ಪಿ, ಮತ್ತು ಸ್ವ-ಮೌಲ್ಯಮಾಪನಕ್ಕೆ ಆಯ್ಕೆಯಾಗದ ಒಬ್ಬ ಮುಖ್ಯಶಿಕ್ಷಕರಿಗೆ ಈಗಾಗಲೇ ಒಂದು ದಿನದ ತರಬೇತಿಯನ್ನು ನೀಡಲಾಗಿದೆ.
2. ಬಾಹ್ಯ-ಮೌಲ್ಯಮಾಪನಕ್ಕೆ ಒಳಪಡುವ ಶಾಲೆಗಳಿಗೆ ವಿದ್ಯಾರ್ಥಿಗಳ ಸಂಖ್ಯೆಗಳಿಗೆ ಅನುಗುಣವಾಗಿ ಈಗಾಗಲೇ ತರಬೇತಿಯನ್ನು ಪಡೆದ ಅಧಿಕಾರಿಗಳನ್ನು ಬಾಹ್ಯ ಮೌಲ್ಯಮಾಪಕರಾಗಿ ಆಯ್ಕೆ ಮಾಡಿ ಪಟ್ಟಿಯನ್ನು ರಾಜ್ಯ ಕಛೇರಿಗೆ ಸಲ್ಲಿಸುವುದು.
3. ಬಾಹ್ಯ-ಮೌಲ್ಯಮಾಪನಕ್ಕೆ ಆಯ್ಕೆಯಾದ ಪ್ರತೀ ಶಾಲೆಗೆ ಬಾಹ್ಯ-ಮೌಲ್ಯಮಾಪನದ **ಬಳಕೆದಾರರ ID ಮತ್ತು Password** ಸೃಷ್ಟಿಸುವುದು ಮತ್ತು ಆಯ್ಕೆಯಾದ ಶಾಲೆಯನ್ನು ಬಾಹ್ಯ-ಮೌಲ್ಯಮಾಪಕರಿಗೆ ವಹಿಸುವುದು. ಈ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿವರವಾದ ಮಾರ್ಗಸೂಚಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ.

4. ಶಾಲಾ ಬಾಹ್ಯ-ಮೌಲ್ಯಮಾಪನಕ್ಕೆ ಮೊದಲು 'ಶಾಲಾಸಿದ್ಧಿ' ಬಾಹ್ಯ-ಮೌಲ್ಯಮಾಪನದ ಸಾಹಿತ್ಯ ಹಾಗೂ ಡ್ಯಾಶ್ ಬೋರ್ಡ್‌ಗಳನ್ನು (www.nuepa.org/shaalasiddhi.nuepa.org) ಅಧ್ಯಯನ ಮಾಡುವಂತೆ ಬಾಹ್ಯ ಮೌಲ್ಯಮಾಪಕರಿಗೆ ಸೂಚಿಸುವುದು.
5. ಬಾಹ್ಯ-ಮೌಲ್ಯಮಾಪನಕ್ಕೆ ಆಯ್ಕೆಯಾದ ಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಈ ಕೆಳಗಿನಂತೆ ಬಾಹ್ಯ ಮೌಲ್ಯಮಾಪಕರನ್ನು ಆಯ್ಕೆ ಮಾಡುವುದು.

| ಕ್ರ.ಸಂ | ವಿದ್ಯಾರ್ಥಿಗಳ ಸಂಖ್ಯೆ | ಬಾಹ್ಯ ಮೌಲ್ಯಮಾಪಕರ ಸಂಖ್ಯೆ | ಮೌಲ್ಯಮಾಪನ ಮಾಡಬೇಕಾದ ದಿನಗಳು |
|---|---|---|---|
| 1 | 109 ರವರೆಗೆ | 1 | 1 |
| 2 | 110-309 ರವರೆಗೆ | 2 | 2 |
| 3 | 310 ಕ್ಕಿಂತ ಮೇಲ್ಪಟ್ಟು | 3 | 2 |

6. ಬಾಹ್ಯ ಮೌಲ್ಯಮಾಪಕರಿಂದ ಬಾಹ್ಯ-ಮೌಲ್ಯಮಾಪನದ ನಂತರ ನಿಗದಿತ ವೇಳಾಪಟ್ಟಿಯಂತೆ NUEPA ದ ವೆಬ್‌ಪೋರ್ಟಲ್ ನಲ್ಲಿರುವ ಡ್ಯಾಶ್‌ಬೋರ್ಡನ್ನು ಅಪ್‌ಲೋಡ್ ಮಾಡಿಸುವುದು.
7. ಆಯ್ಕೆಯಾದ ಎಲ್ಲಾ ಶಾಲೆಗಳ ಮಾಹಿತಿಯನ್ನು ವೆಬ್‌ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿರುವುದರ ದೃಢೀಕರಣವನ್ನು ರಾಜ್ಯ ಕಛೇರಿಗೆ ನೀಡುವುದು.

**ಶಾಲಾ ಹಂತದ ಕರ್ತವ್ಯಗಳು:-**

1. ಬಾಹ್ಯ-ಮೌಲ್ಯಮಾಪನಕ್ಕೆ ಆಯ್ಕೆಯಾದ ಶಾಲೆಗಳ ಸ್ವ-ಮೌಲ್ಯಮಾಪನದ ಎಲ್ಲಾ ಮಾಹಿತಿಗಳು Dash board ನಲ್ಲಿ Upload ಆಗಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು.
2. ವೆಬ್‌ಪೋರ್ಟಲ್‌ನಲ್ಲಿರುವ ಡ್ಯಾಶ್ ಬೋರ್ಡನ್ನು ಅಪ್‌ಲೋಡ್ ಮಾಡಿರುವ ಮಾಹಿತಿಯ ಮುದ್ರಿತ ಪ್ರತಿ/ಹಾರ್ಡ್‌ಕಾಪಿಯನ್ನು ಶಾಲೆಯಲ್ಲಿ ಕಾಯ್ದಿರಿಸುವುದು.
3. ಬಾಹ್ಯ-ಮೌಲ್ಯಮಾಪನದ ವೇಳಾಪಟ್ಟಿಯನ್ನು ಬಿ.ಇ.ಒ/ಡಯಟ್‌ನಿಂದ ಪಡೆಯುವುದು.
4. ಬಾಹ್ಯ-ಮೌಲ್ಯಮಾಪನ ಪ್ರಕ್ರಿಯೆಯ ಬಗ್ಗೆ ಎಸ್.ಎಸ್.ಎ ವತಿಯಂದ ಸರಬರಾಜಾಗಿರುವ ಶಾಲಾಸಿದ್ಧಿ ಕಾರ್ಯಕ್ರಮದ ಸಾಹಿತ್ಯದಲ್ಲಿನ ಬಾಹ್ಯ-ಮೌಲ್ಯಮಾಪನ ಮಾರ್ಗಸೂಚಿಯನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳುವುದು.
5. ಬಾಹ್ಯ-ಮೌಲ್ಯಮಾಪನದ ದಿನಗಳು ಹಾಗೂ ಅಧಿಕಾರಿಗಳ ವಿವರವನ್ನು ಬಿ.ಇ.ಒ/ಡಯಟ್‌ನಿಂದ ಪಡೆಯುವುದು.
6. ಶಾಲೆಯ ಸ್ವ-ಮೌಲ್ಯಮಾಪನದಂತೆಯೇ ಏಳು ಪ್ರಮುಖ ಕಾರ್ಯಕ್ಷೇತ್ರಗಳಿಗೆ ಅನುಗುಣವಾಗಿ ಬಾಹ್ಯ-ಮೌಲ್ಯಮಾಪನವನ್ನು ಕೈಗೊಳ್ಳಲಾಗುವುದು.
7. ಶಾಲೆಯ ಬಾಹ್ಯ-ಮೌಲ್ಯಮಾಪನದ ಸಂದರ್ಭದಲ್ಲಿ ಬಾಹ್ಯ-ಮೌಲ್ಯಮಾಪನಕ್ಕೆ ನಿಯೋಜನೆಗೊಂಡಿರುವ ಅಧಿಕಾರಿಗಳು ಮುಖ್ಯಶಿಕ್ಷಕರು/ಪ್ರಾಂಶುಪಾಲರು, ವಿದ್ಯಾರ್ಥಿಗಳು, ಶಿಕ್ಷಕರು, ತಂದೆ,ತಾಯಿ/ಪೋಷಕರು, ಎಸ್.ಡಿ.ಎಂ.ಸಿ ಸದಸ್ಯರು ಮತ್ತು ನಿಕಟ ಸಮುದಾಯದ ಸದಸ್ಯರು ಸೇರಿದಂತೆ ಎಲ್ಲಾ ಭಾಗೀದಾರರನ್ನು ಬಾಹ್ಯ-ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡು ಶಾಲೆಯ ಸುಧಾರಣೆಯ ಅಗತ್ಯತೆಗಳನ್ನು ಚರ್ಚಿಸುವುದು.

**ಬಾಹ್ಯ ಮೌಲ್ಯಮಾಪಕರ ಕರ್ತವ್ಯಗಳು:-**

1. ಬಾಹ್ಯ-ಮೌಲ್ಯಮಾಪನಕ್ಕೆ ನಿಯೋಜಿಸಿದ ಶಾಲೆಯ ಮಾಹಿತಿಯನ್ನು ಸಂಬಂಧಿಸಿದ ಜಿಲ್ಲಾ ಡಯಟ್ ಪ್ರಾಂಶುಪಾಲರು/ನೋಡಲ್ ಅಧಿಕಾರಿಗಳಿಂದ ಪಡೆಯುವುದು.
2. ಬಾಹ್ಯ-ಮೌಲ್ಯಮಾಪನದ ಮಾರ್ಗಸೂಚಿಯನ್ನು ವಿವರವಾಗಿ ಅಧ್ಯಯನ ಮಾಡುವುದು.
3. ನಿಗದಿತ ವೇಳಾಪಟ್ಟಿಯಂತೆ ನಿಯೋಜಿಸಿದ ಶಾಲೆಗೆ ಹಾಜರಾಗುವುದು.
4. ನಿಯೋಜಿಸಿದ ಶಾಲೆಯ ಸ್ವ-ಮೌಲ್ಯಮಾಪನದ ವರದಿಯನ್ನು ಅಧ್ಯಯನ ಮಾಡುವುದು.

5. ಶಾಲೆಯ ಬಾಹ್ಯ-ಮೌಲ್ಯಮಾಪನದ ಸಂದರ್ಭದಲ್ಲಿ ಮುಖ್ಯಶಿಕ್ಷಕರು/ಪ್ರಾಂಶುಪಾಲರು, ವಿದ್ಯಾರ್ಥಿಗಳು, ಶಿಕ್ಷಕರು, ತಂದೆ,ತಾಯಿ/ಪೋಷಕರು, ಎಸ್.ಡಿ.ಎಂ.ಸಿ ಸದಸ್ಯರು ಮತ್ತು ನಿಕಟ ಸಮುದಾಯದ ಸದಸ್ಯರು ಸೇರಿದಂತೆ ಎಲ್ಲಾ ಭಾಗೀದಾರರನ್ನು ಬಾಹ್ಯ-ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡು ಶಾಲೆಯ ಸುಧಾರಣೆಯ ಅಗತ್ಯತೆಗಳನ್ನು ಚರ್ಚಿಸುವುದು.
6. ಬಾಹ್ಯ-ಮೌಲ್ಯಮಾಪನದ ಸಂದರ್ಭದಲ್ಲಿ ಮಾರ್ಗಸೂಚಿಯಲ್ಲಿರುವಂತೆ ನೈತಿಕ ಮಾನದಂಡಗಳನ್ನು ಅನುಸರಿಸುವುದು.
7. ಶಾಲೆಯ ಸ್ವ-ಮೌಲ್ಯಮಾಪನದಂತೆಯೇ ಏಳು ಪ್ರಮುಖ ಕಾರ್ಯಕ್ಷೇತ್ರಗಳಿಗೆ ಅನುಗುಣವಾಗಿ ಬಾಹ್ಯ-ಮೌಲ್ಯಮಾಪನವನ್ನು ಕೈಗೊಳ್ಳುವುದು.
8. ಜಿಲ್ಲಾ ಹಂತದಲ್ಲಿ ಸೃಷ್ಟಿಸಲಾದ ನಿಯೋಜಿಸಿದ ಶಾಲೆಯ ಬಾಹ್ಯ-ಮೌಲ್ಯಮಾಪನದ ಬಳಕೆದಾರರ ID ಮತ್ತು Password ಪಡೆದು ವರದಿಯನ್ನು ಡ್ಯಾಶ್‌ಬೋರ್ಡನಲ್ಲಿ ಅಪ್‌ಲೋಡ್ ಮಾಡುವುದು. ಈ ಪ್ರಕ್ರಿಯೆಗೆ ಸಂಬಂಧಿಸಿದಂತೆ ವಿವರವಾದ ಮಾರ್ಗಸೂಚಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಿದೆ.
9. ಡ್ಯಾಶ್ ಬೋರ್ಡನ್ನು ಅಪ್‌ಲೋಡ್ ಮಾಡಿರುವ ಮಾಹಿತಿಯ ಮುದ್ರಿತ ಪ್ರತಿ/ಹಾರ್ಡ್‌ಕಾಪಿಯನ್ನು ಜಿಲ್ಲಾ ಕೇಂದ್ರಕ್ಕೆ ಸಲ್ಲಿಸುವುದು.

'ಶಾಲಾಸಿದ್ಧಿ' ಕಾರ್ಯಕ್ರಮದ ಮುಖ್ಯ ಉದ್ದೇಶ **"ಶಾಲಾ ಮೌಲ್ಯಮಾಪನ ಒಂದು ಸಾಧನವಾಗಿ ಮತ್ತು ಶಾಲಾ ಸುಧಾರಣೆ ಒಂದು ಗುರಿ"** ಯನ್ನಾಗಿಸುವುದಾಗಿದೆ. ಈ ನಿಟ್ಟಿನಲ್ಲಿ ಸದರಿ ಕಾರ್ಯಕ್ರಮವನ್ನು ನಮ್ಮ ರಾಜ್ಯದಲ್ಲೂ ಯಶಸ್ವಿಗೊಳಿಸುವುದು ಇಲಾಖೆಯ ಎಲ್ಲಾ ಹಂತದ ಅಧಿಕಾರಿಗಳ ಮುಖ್ಯ ಜವಾಬ್ದಾರಿಯಾಗಿದೆ ಮತ್ತು ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿರುವ ಈ ಚಟುವಟಿಕೆಯನ್ನು ಯಶಸ್ವಿಗೊಳಿಸುವಂತೆ ಎಲ್ಲಾ ಹಂತದ ಅಧಿಕಾರಿಗಳು, ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರಿಗೆ ಈ ಮೂಲಕ ತಿಳಿಸಿದೆ.

(ವಿ. ಸುಮಂಗಲ)
**ನಿರ್ದೇಶಕರು ಪರೀಕ್ಷೆಗಳು ಹಾಗೂ**
**ಕಾರ್ಯನಿರ್ವಾಹಕ ನಿರ್ದೇಶಕರು,**
**ಕೆ.ಎಸ್.ಕ್ಯು.ಎ.ಎ.ಸಿ.**

**ಪ್ರತಿಯನ್ನು ಗೌರವ ಪೂರ್ವಕವಾಗಿ ಮಾಹಿತಿಗಾಗಿ,**

1) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಿದೆ.
2) ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ ರವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಿದೆ.

**ಪ್ರತಿಯನ್ನು,**

1) ಎಲ್ಲಾ ಜಿಲ್ಲೆಯ ಡಯಟ್ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಸೂಕ್ತ ಕ್ರಮಕ್ಕಾಗಿ.
2) ಎಲ್ಲಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ರವರಿಗೆ ಸೂಕ್ತ ಕ್ರಮಕ್ಕಾಗಿ.
3) ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
4) ಎಲ್ಲಾ ಶಾಲಾಸಿದ್ಧಿ ಕಾರ್ಯಕ್ರಮದ ನೋಡಲ್ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
5) ಕಛೇರಿ ಪ್ರತಿ.

## 2018-19ನೇ ಸಾಲಿನ ಶಾಲಾಸಿದ್ಧಿ ಕಾರ್ಯಕ್ರಮದ ಬಾಹ್ಯ-ಮೌಲ್ಯಮಾಪನದ ವೇಳಾಪಟ್ಟಿ

| ಕ್ರ.ಸಂ | ವಿಷಯ | ಕಾಲಾವಧಿ | ಜವಾಬ್ದಾರಿ |
|---|---|---|---|
| 1 | ಬಾಹ್ಯ-ಮೌಲ್ಯಮಾಪನಕ್ಕೆ ಶಾಲೆಗಳ ಆಯ್ಕೆ | ಮುಗಿದಿದೆ | ಕೆ.ಎಸ್.ಕ್ಯು.ಎ.ಎ.ಸಿ |
| 2 | ಜಿಲ್ಲಾ ಡಯಟ್‌ನಿಂದ ಆಯ್ಕೆಯಾದ 4 ಸಂಪನ್ಮೂಲ ವ್ಯಕ್ತಿಗಳಿಗೆ ರಾಜ್ಯ ಹಂತದಲ್ಲಿ ತರಬೇತಿ | ಮುಗಿದಿದೆ | ಕೆ.ಎಸ್.ಕ್ಯು.ಎ.ಎ.ಸಿ |
| 3 | ರಾಜ್ಯ ಹಂತದಲ್ಲಿ ತರಬೇತಿ ಪಡೆದ 4 ಜನ ಸಂಪನ್ಮೂಲ ವ್ಯಕ್ತಿಗಳಿಂದ ಆಯ್ದ ಶಾಲಾ ಮುಖ್ಯ ಶಿಕ್ಷಕರಿಗೆ ಹಾಗೂ ಬಾಹ್ಯ ಮೌಲ್ಯಮಾಪಕರಿಗೆ ಜಿಲ್ಲಾ ಹಂತದ ತರಬೇತಿ | ಮುಗಿದಿದೆ | ಜಿಲ್ಲಾ ಡಯಟ್ |
| 4 | ಬಾಹ್ಯ ಮೌಲ್ಯಮಾಪಕರನ್ನು ಆಯ್ಕೆ ಮಾಡಿ ಬಳಕೆದಾರರ ಐ.ಡಿ ಮತ್ತು ಪಾಸ್‌ವರ್ಡ್ ಸೃಷ್ಟಿಸಿ ಶಾಲೆಯನ್ನು Assign ಮಾಡಿ ಸಂಬಂಧಿಸಿದ ಬಾಹ್ಯ ಮೌಲ್ಯಮಾಪಕರಿಗೆ ನೀಡುವುದು. | 22.02.2019 | ಜಿಲ್ಲಾ ಡಯಟ್ |
| 5 | ಬಾಹ್ಯ ಮೌಲ್ಯಮಾಪನಕ್ಕಾಗಿ ಜಿಲ್ಲಾ ಹಂತಕ್ಕೆ ಅನುದಾನದ ಬಿಡುಗಡೆ | 23.02.2019 | ಕೆ.ಎಸ್.ಕ್ಯು.ಎ.ಎ.ಸಿ |
| 6 | ಬಾಹ್ಯ-ಮೌಲ್ಯಮಾಪನ | 25.02.2019 ರಿಂದ 05.03.2019 | ಬಾಹ್ಯ ಮೌಲ್ಯಮಾಪಕರು |
| 7 | ಬಾಹ್ಯ-ಮೌಲ್ಯಮಾಪನದ ವಿವರಗಳನ್ನು Web portal ನಲ್ಲಿ Upload ಮಾಡಲು ಕೊನೆಯ ದಿನಾಂಕ | 15.03.2019 | ಬಾಹ್ಯ ಮೌಲ್ಯಮಾಪಕರು |
| 8 | ಆಯ್ಕೆಯಾದ ಎಲ್ಲಾ ಶಾಲೆಗಳ ಬಾಹ್ಯ ಮೌಲ್ಯಮಾಪನದ ವಿವರಗಳು Web portal ನಲ್ಲಿ Upload ಆಗಿರುವ ಬಗ್ಗೆ ವರದಿಯನ್ನು ರಾಜ್ಯ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ | 22.03.2019 | ಜಿಲ್ಲಾ ಡಯಟ್ |
| 9 | ಬಾಹ್ಯ-ಮೌಲ್ಯಮಾಪನದ ಬಗ್ಗೆ NUEPA ಗೆ ವರದಿ ಸಲ್ಲಿಕೆ | 25.03.2019 | ಕೆ.ಎಸ್.ಕ್ಯು.ಎ.ಎ.ಸಿ |
| 10 | ಉಪಯೋಗಿತ ಪ್ರಮಾಣ ಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 25.03.2019 | ಜಿಲ್ಲಾ ಡಯಟ್ |

21/2/19

(ವಿ. ಸುಮಂಗಲ)
ನಿರ್ದೇಶಕರು ಪರೀಕ್ಷೆಗಳು ಹಾಗೂ
ಕಾರ್ಯನಿರ್ವಾಹಕ ನಿರ್ದೇಶಕರು,
ಕೆ.ಎಸ್.ಕ್ಯು.ಎ.ಎ.ಸಿ.